ನಿರ್ಜನ ಬೀದಿ ಮತ್ತು ನಾವಿಬ್ಬರೇ. ಆದರೂ, ತನಗೆ ಹೆದರಿಕೆಯೇ ಆಗುತ್ತಿಲ್ಲವಲ್ಲ ಎಂದು ಅಚ್ಚರಿಗೊಂಡಳು, ಬದಲಾಗಿ, ಇವತ್ತು ಏನೋ ಒಂದು ಘಟಿಸಲಿದೆ ಎನಿಸಿ ನಿಂತಲ್ಲೇ ಬೆಚ್ಚಗಾದಳು

★★★

ಹಬ್ಬವಾದ್ದರಿಂದ ಲಕ್ಷ್ಮಿ ಇಂದು ಬೆಳಗ್ಗೆ ಸೀರೆ ಉಟ್ಟು, ಮಲ್ಲಿಗೆ ಮುಡಿದು, ಸಿಂಗರಿಸಿಕೊಂಡು ಸಂಭ್ರಮದಿಂದಲೇ ಮಾಲ್ ತಲುಪಿದ್ದಳು. ಹಬ್ಬದ ದಿನ ಸಮವಸ್ತ್ರಕ್ಕೆ ವಿನಾಯತಿ ಇರುತ್ತದೆಂಬ ಅವಳ ನಂಬಿಕೆ ಹುಸಿಯಾಗಿತ್ತು. ಮ್ಯಾನೇಜರ್ ಹಟ ಹಿಡಿದು ಯೂನಿಫಾರ್ಮ್ ಹಾಕಿಸಿದ್ದ. ಅವಳ ಹೂವು, ಕುಂಕುಮ, ಜುಮುಕಿಗೂ, ಆ ಜೀನ್ಸ್ ಟೀಶರ್ಟಿನ ಸಮವಸ್ತ್ರಕ್ಕೂ ಶ್ರುತಿ ಸೇರದೆ, ಅವಳೊಂದು ದೊಡ್ಡ ಅಪಸ್ವರದಂತೆ ಕಾಣಿಸುತ್ತಿದ್ದಳು. ದೀಪಾವಳಿ ಆಫರ್‌ಗಳಿಗಾಗಿ ಮಾಲ್'ಗೆ ಬರುವವರ ಸಂಖ್ಯೆ ಜಾಸ್ತಿ. ಬೆಳಗ್ಗೆಯಿಂದ ಪಾರ್ಕಿಂಗ್'ನಲ್ಲಿ ನಿಂತು, ಟೋಕನ್ ಕೊಟ್ಟು ಸೋತಿದ್ದಳು. ಸುಸ್ತಾಗಿ ರಾತ್ರಿ ಮನೆಗೆ ಹೊರಟವಳು ಮೆಜೆಸ್ಟಿಕ್ ತಲುಪುವ ಮೊದಲೇ ಮಳೆಗೆ ಸಿಲುಕಿದ್ದಳು. ಅವಳು ಒಂಬತ್ತು ಗಂಟೆಯ ಬಸ್ಸು ಹಿಡಿದರೆ, ಹನ್ನೊಂದಕ್ಕಾದರೂ ಮನೆ ಸೇರಬಹುದು. ಆ ಬಸ್ ತಪ್ಪಿದರೆ ತೀರಾ ತಡವಾಗುತ್ತದೆಂಬುದು ಗೊತ್ತಿದ್ದರೂ ಅವಳಿಗೆ ಆತಂಕವಾಗುತ್ತಿಲ್ಲ.

ಏಳು ವರ್ಷದ ಹಿಂದೆ, ದೇವನಹಳ್ಳಿಯ ಬಳಿಯ ತಮ್ಮ ಜಮೀನನ್ನು ಚಿನ್ನದ ಬೆಲೆಗೆ ಮಾರಿದ್ದ ಅವಳಪ್ಪ, ಅವಳ ಅಕ್ಕನ ಮದುವೆಯನ್ನು ಜನ ನಾಲ್ಕು ದಿನ ನೆನಪಿಟ್ಟುಕೊಳ್ಳುವಂತೆ ಮಾಡಿ ಮುಗಿಸಿದ್ದರು. ಲಕ್ಷ್ಮಿಯ ಮದುವೆಗೆಂದೂ ದೊಡ್ಡ ಗಂಟು ತೆಗೆದಿಟ್ಟಿದ್ದರು. ಆದರೆ, ಅವಳಣ್ಣನ ಬಿಸ್ನೆಸ್ ಉಮೇದಿಗೆ ಅವಳ ಮದುವೆ ಖರ್ಚಿನ ಖಜಾನೆ ಲೂಟಿಯಾಗಿತ್ತು. ಅವನಂತೇ ಐಡಿಯಾಗಳಿಂದ ಮತ್ತು ಹೊಲ ಮಾರಿದ ದುಡ್ಡಿನಿಂದ ತುಂಬಿ ತುಳುಕುತ್ತಿದ್ದ ಸ್ನೇಹಿತರುಗಳು, ಹೊಸ ಹೆದ್ದಾರಿಯ ಧಾಬಾಗಳಲ್ಲಿ ಕುಳಿತು, ವರ್ಷಗಳ ಕಾಲ ಬಿಸಿನೆಸ್ ಮೀಟಿಂಗ್ ನಡೆಸಿದ್ದರು. ಈಗ ಖಾಲಿಯಾಗಿ ಎಲ್ಲರೂ ಕೆಲಸ ಹುಡುಕಿಕೊಂಡಿದ್ದರು. ಅವಳಣ್ಣ ಮಾತ್ರ 'ಗೌಡಾಸ್' ಎಂದು ದೊಡ್ಡದಾಗಿ ಬರೆದ, ರಾಕ್ಷಸಾಕಾರದ ಬುಲೆಟ್ ಮೇಲೆ ದಿಕ್ಕು ತಪ್ಪಿದಂತೆ ಸುತ್ತುತ್ತಲೇ ಇದ್ದ.

ಆದರೆ, ಲಕ್ಷ್ಮಿ ಕೆಲಸಕ್ಕೆ ಸೇರುತ್ತೇನೆಂದಾಗ ಮಾತ್ರ ಕೂಗಾಡಿಬಿಟ್ಟಿದ್ದ. ತನ್ನಣ್ಣನ ಕಲರ್ ಎಲ್.ಇ.ಡಿ ಕನಸುಗಳ ನಡುವೆ, ತನ್ನ ಬ್ಲಾಕ್ ಆಂಡ್ ವೈಟ್ ಕನಸುಗಳು ನಿಜವಾಗಲಾರವೆಂಬ ಸತ್ಯದ ಅರಿವಾಗಿದ್ದ ಅವಳು, ಹಟ ಹಿಡಿದು ಕೆಲಸಕ್ಕೆ ಸೇರಿದ್ದಳು. ಮತ್ತು, ಈಗೀಗ ಅವನ ಪೆಟ್ರೋಲ್ ಖರ್ಚಿಗೆ ಇವಳೇ ದುಡ್ಡು ಕೊಡುತ್ತಿದ್ದಾಳೆ. ಮೂವತ್ತರ ಹೊಸ್ತಿಲಲ್ಲಿರುವ ಲಕ್ಷ್ಮಿಗೆ ಮಾಲ್‌ನ ಪಾರ್ಕಿಂಗ್ ಲಾಟಿನ ಏಕತಾನತೆಯಲ್ಲಿ ಕರಗುತ್ತಿರುವ ತನ್ನ ಯೌವನದ ವಾಸನೆ ಬೆಚ್ಚಿಬೀಳಿಸುತ್ತದೆ. ಹೊಸ ಅನುಭವಕ್ಕಾಗಿ ಉಸಿರುಕಟ್ಟಿ ಕಾಯುತ್ತಿದ್ದಾಳೆ.

★★★

ಕೇಶವನಿಗೂ ಇವತ್ತು ಸಿಕ್ಕಾಪಟ್ಟೆ ಕೆಲಸವಾಗಿತ್ತು. ಅಂಗಡಿಗಳಲ್ಲಿ ಲಕ್ಷ್ಮಿಪೂಜೆ ನಡೆಸಿ ಕೊಡಲು ಬೆಳಗ್ಗಿನಿಂದಲೂ ಬೈಕ್ ಹತ್ತಿ ಒಂದೇ ಸಮನೆ ಬೆಂಗಳೂರಿನ ಮೂಲೆ ಮೂಲೆ ಸುತ್ತಿದ್ದ. ಇದೊಂದು ರೀತಿಯಲ್ಲಿ ಪುರೋಹಿತರಿಗೆ ಸಿಗುವ ದೀಪಾವಳಿ ಬೋನಸ್ ಆದ್ದರಿಂದ, ಯಾರಿಗೂ ಇಲ್ಲವೆನ್ನದೆ ಬಂದ ಎಲ್ಲಾ ಪೂಜೆಗಳನ್ನು ವಹಿಸಿಕೊಂಡಿದ್ದ. ಎಲ್ಲವನ್ನೂ ಮುಗಿಸಿ ಮನೆಗೆ ಹೊರಟವನಿಗೆ ಅರ್ಧದಾರಿಯಲ್ಲೇ ಮಳೆ ಎದುರಾಗಿತ್ತು. ಮಳೆ ತೀರಾ ಜೋರಾದಾಗ, ಬೈಕ್ ನಿಲ್ಲಿಸಿ, ಲಕ್ಷ್ಮಿ ಆಶ್ರಯ ಪಡೆದಿದ್ದ ಅಂಗಡಿಯ ಛಾವಣಿಯೊಳಗೆ ತೂರಿಕೊಂಡಿದ್ದ. ಪುತ್ತೂರಿನ ಮೂಲೆಯಲ್ಲಿದ್ದ ತನ್ನ ಹಳ್ಳಿಯ ಶಾಲೆಗೆ ಹೋಗುತ್ತಿದ್ದಾಗ, ಬೆಚ್ಚಗೆ ಮಲಗುವ ಸುಖಕ್ಕಾಗಿ ಜ್ವರ ಬರಲಿ ದೇವರೇ